ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನ

630 (1232) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಕಳೆದ ಎರಡು ವರ್ಷಗಳಿಂದ ಬಿಡುಗಡೆ ಮಾಡಲಾದ ಅನುದಾನವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)?

ಆ) ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಹಣ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ತಾರತಮ್ಯವನ್ನು ಯಾವಾಗ ಸರಿಪಡಿಸಲಾಗುವುದು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು) :

ಅ) ಸರ್ಕಾರದಿಂದ ಮಂಡಳಿಗೆ 2007–08ರಲ್ಲಿ ರೂ.2825.00 ಲಕ್ಷಗಳನ್ನು ಹಾಗೂ 2008–09ರಲ್ಲಿ ರೂ. 1057.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮಂಡಳಿಯಿಂದ ಜಿಲ್ಲಾವಾರು ಸಾಧಿಸಿದ ಪ್ರಗತಿಗೆ ಅನುಸಾರವಾಗಿ ವೆಚ್ಚ ಭರಿಸಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಪ್ರತಿ ವರ್ಷ ಸರ್ಕಾರವು ಬಿಡುಗಡೆಗೊಳಿಸುವ ಅನುದಾನದಲ್ಲಿ ಸರ್ಕಾರದ ಮತ್ತು ಅಧ್ಯಕ್ಷರ ವಿವೇಚನಾ ನಿಧಿ ಹಾಗೂ ಆಡಳಿತ ವೆಚ್ಚಕ್ಕೆ ಅವಕಾಶ ಮಾಡಿಕೊಂಡು ಉಳಿದ ಅನುದಾನವನ್ನು ವಿಧಾನ ಸಭಾ ಕ್ಷೇತ್ರವಾರು ಸಮನಾಗಿ ಹಂಚಿಕೆ ಮಾಡಿ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಯಾವುದೇ ತಾರತಮ್ಯ ಎಸೆಗಿರುವುದಿಲ್ಲ.

ಅನುಬಂಧ

2007–08ರಿಂದ 2009–10ವರೆಗೆ ಮಂಡಳಿಯಿಂದ ಜಿಲ್ಲಾವಾರು ಬಿಡುಗಡೆ ಅನುದಾನದ ವಿವರಗಳು

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆ	2007–08	2008–09	2009–10
1	ಬೆಳಗಾಂ	334.79	252.52	117.79
2	ಚಾಮರಾಜನಗರ	121.65	200.11	82.22
3	ಚಿಕ್ಕಮಗಳೂರು	243.12	222.44	99.39
4	ದಾವಣಗೆರೆ	73.38	140.64	75.58
5	ಧಾರವಾಡ	111.50	69.92	35.51
6	ಹಾಸನ	151.81	179.80	81.53
7	ಹಾವೇರಿ	221.29	172.31	87.24
8	ಕೊಡಗು	152.69	112.41	84.90
9	ಮಂಗಳೂರು	214.72	362.34	242.07
10	ಮೈಸೂರು	98.32	149.88	50.87
11	ಶಿವಮೊಗ್ಗ	426.30	435.59	225.83
12	ಉಡುಪಿ	220.02	247.20	68.62
13	ಉತ್ತರಕನ್ನಡ	192.25	240.74	98.63
	ಒಟ್ಟು	**2561.84**	**2785.60**	**1350.18**